# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 919 |
| ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 14-03-2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ 9425 ಹೆಕ್ಟೇರ್ ಭತ್ತದ ಬೆಳೆ ಹಾನಿಯಾಗಿದ್ದು ಇದರಿಂದಾಗಿ 21721 ರೈತರು ಕಂಗಾಲಾಗಿರುವುದಲ್ಲದೆ ನಿಗದಿಪಡಿಸಿದ ದರಗಿಂತಲೂ ಬೆಳೆ ಬೆಲೆ ಕಡಿಮೆ ಆಗಿದ್ದು, ಈ ಕೂಡಲೇ ಬೆಳೆ ಪರಿಹಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಸಿಂಧನೂರು ತಾಲೂಕಿನಲ್ಲಿ ನವೆಂಬರ್-24 ರ ಮಾಹೆಯಲ್ಲಿ ಸುರಿದ ಅಕಾಲಿಕ ಮಳೆಯಿಂದ 9425 ಹೆಕ್ಟೇರ್ ಭತ್ತದ ಬೆಳೆ ಹಾನಿಯಾಗಿದ್ದು, ಈ ಪೈಕಿ ಈಗಾಗಲೇ ಪರಿಹಾರ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಿದ 7505.47 ಹೆಕ್ಟರ್ ಪ್ರದೇಶದ 14,724 ರೈತ ಫಲಾನುಭವಿಗಳಿಗೆ NDRF/SDRF ಮಾರ್ಗಸೂಚಿಯಂತೆ ಮಳೆಯಾಶ್ರಿತ ಬೆಳೆ ಹಾನಿಗೆ ಪ್ರತಿ ಹೆಕ್ಟರ್‌ಗೆ ರೂ.8,500/- ಹಾಗೂ ನೀರಾವರಿಗೆ ರೂ.17,000/- ನಿಗದಿಪಡಿಸಲಾಗಿದ್ದು, ಅದರಂತೆ ಒಟ್ಟು ರೂ. 12,77,04,659/-ಗಳ ಪರಿಹಾರ ಧನ ಪಾವತಿಸಲಾಗಿರುತ್ತದೆ. |
| ಆ) | ಬೆಂಬಲ ಬೆಲೆ ಘೋಷಿತ ಭತ್ತ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದರೆ ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ; | ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಹಾಗೂ ನಿಗಧಿಪಡಿಸಿರುವ ದರಗಳನ್ವಯ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ 2024-25ನೇ ಸಾಲಿನ ಮುಂಗಾರು ಋತುವಿನಲ್ಲಿ ರಾಜ್ಯದ ರೈತರಿಂದ 7.45 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಖರೀದಿಸಲು ಆದೇಶಿಸಲಾಗಿರುತ್ತದೆ.<br><br>ಅದರಂತೆ ರಾಯಚೂರು ಜಿಲ್ಲೆಯಲ್ಲಿ 30 ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಈ ಪೈಕಿ ಸಿಂಧನೂರು ತಾಲ್ಲೂಕಿನಲ್ಲಿ 14 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. |
| ಇ) | ಸೋನಾಮಸೂರಿ ಭತ್ತದ ತಳಿಗೆ ಜಿಐ ಟ್ಯಾಗ್ ನೀಡಿದರೆ ಪ್ರಪಂಚದಾದ್ಯಂತ ಭತ್ತಕ್ಕೆ ಮೌಲ್ಯ ಬರಲಿದ್ದು ಈ ಬಗ್ಗೆ ಸರ್ಕಾರದ ಚಿಂತನೆಯೇನು? | ಸೋನಾಮಸೂರಿ ಭತ್ತದ ತಳಿಯು ಮೂಲತಃ ಬಾಪಟ್ಲಾ ಸಂಶೋಧನಾ ಕೇಂದ್ರ, ಆಚಾರ್ಯ ಎನ್.ಜಿ.ರಂಗ ಕೃಷಿ ವಿಶ್ವವಿದ್ಯಾಲಯ, ಗುಂಟೂರು, ಆಂದ್ರಪ್ರದೇಶದಿಂದ ಅಭಿವೃದ್ಧಿಪಡಿಸಲಾಗಿದ್ದು, ಈ ತಳಿಯನ್ನು ಐಸಿಎಆರ್-ಭಾರತೀಯ ಭತ್ತ ಅಭಿವೃದ್ಧಿ ಸಂಸ್ಥೆ, ಹೈದರಾಬಾದ್ ನಿಂದ |

| | | |
|---|---|---|
| | | 1982 ರಲ್ಲಿ ಬಿಡುಗಡೆಗೊಂಡಿರುತ್ತದೆ. ಈ ತಳಿಯು ನಮ್ಮ ರಾಜ್ಯದ ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಧಿಕವಾಗಿ ಬೆಳೆಯುತ್ತಿದ್ದು, ಅದರಲ್ಲೂ ಸಿಂಧನೂರು ತಾಲ್ಲೂಕಿನಾದ್ಯಂತ ಈ ತಳಿಯು ಸ್ಥಳೀಯ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಂಡು ಉತ್ತಮ ಇಳುವರಿ ನೀಡುತ್ತಿದೆ. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯು ಅಖಿಲ ಭಾರತ ಸಂಯೋಜಿತ ಭತ್ತ ಅಭಿವೃದ್ಧಿ ಯೋಜನೆಯ ವಿಜ್ಞಾನಿಗಳಿಂದ ಸೋನಾಮಸೂರಿ ಭತ್ತದ ತಳಿಗೆ ಜಿಐ ಟ್ಯಾಗ್ ಪಡೆಯಲು ಜಿಐ ಟ್ಯಾಗ್ ಸಂಸ್ಥೆ, ಚೆನ್ನೈಗೆ ಅರ್ಜಿಯನ್ನು ಸಲ್ಲಿಸಲಾಗಿತ್ತು. ಈ ತಳಿಯು ಕರ್ನಾಟಕದ ಸ್ಥಳೀಯ ತಳಿಯಲ್ಲವಾದ್ದರಿಂದ ಜಿಐ ಟ್ಯಾಗ್ ಪಡೆಯಲು ಬರುವುದಿಲ್ಲ ಎಂದು ಜಿಐ ಕೊಡುವ ಸಮಿತಿಯಿಂದ ಅರ್ಜಿ ನಿರಾಕರಿಸಲ್ಪಟಿರುತ್ತದೆ. ಜಿಐ ಟ್ಯಾಗ್ ಪಡೆಯಲು ಸ್ಥಳೀಯ ತಳಿಗಳಾಗಿರಬೇಕು ಹಾಗೂ ವಿಶೇಷ ಗುಣಗಳನ್ನು ಸ್ಥಳೀಯವಾಗಿ ಬೆಳೆದಾಗ ಮಾತ್ರ ದೊರೆಯುತ್ತದೆ. ಆದರೆ ಸೋನಾಮಸೂರಿ ನಮ್ಮ ರಾಜ್ಯದ ತಳಿಯಾಗದ ಕಾರಣ ಜಿಐ ಟ್ಯಾಗ್‌ಗೆ ಮಾನ್ಯತೆ ದೊರೆತಿರುವುದಿಲ್ಲ. |

ಸಂಖ್ಯೆ: AGRI/75/ACT/2025

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು